(ಆ) ಸದರಿ ಯೋಜನೆಗೆ 17,664 ಎಕರೆ ಭೂ ಪ್ರದೇಶವು ಒಳಪಡುತ್ತಿದ್ದು, ವಿವರ ಕೆಳಕಂಡಂತಿದೆ.

ಕ್ರ.ಸಂ.	ಗ್ರಾಮ	ವಿಸ್ತೀರ್ಣ
1.	ತಲ್ಲೂರು	3712.36 ಎಕರೆ
2.	ಹೊಸೂರು	3008.07 ಎಕರೆ
3.	ದಾಸನಕೊಡಿಗೆ	1570.99 ಎಕರೆ
4.	ಶುಂಠಿಹಕ್ಲು	4974.20 ಎಕರೆ
5.	ಶಿವಳ್ಳಿ	153.99 ಎಕರೆ
6.	ಬಾಳಹಳ್ಳಿ	4244.39 ಎಕರೆ

(ಇ) ಕರ್ನಾಟಕ ಸರ್ಕಾರವು ಮೇಲ್ಕಂಡ ಯೋಜನೆಗೆ ಪೂರಕವಾದ ಅಧಿಸೂಚನೆ ಹೊರಡಿಸುವುದಿಲ್ಲ.

(ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಅಭಿವೃದ್ಧಿ ಕಾಮಗಾರಿಗಳಿಗೆ ಆಗುವ ತೊಂದರೆಗಳು

362 (258) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) ಮಾನ್ಯ ಅರಣ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ತಿಳಿಸುವರೇ:-

(ಅ) ಅರಣ್ಯ ಇಲಾಖೆಯವರು ರಸ್ತೆ ಕಾಮಗಾರಿಗಳಿಗೆ ಜಲ್ಲಿ, ಮರಳು ಸಾಗಾಣಿಕೆಗೆ ಸರ್ಕಾರಿ ಇಲಾಖೆಯ ಇತರೆಯವರಿಗೆ ಅಡಚಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಅರಣ್ಯ ಇಲಾಖೆಯವರು ಕಂದಾಯ ಇಲಾಖೆಯ ಜಮೀನುಗಳಿಗೆ ಅಳತೆಗೆ ಒಳಪಡಿಸದೆ, ಪೋಡಿ ಮಾಡದೆ, ಟಿಪ್ಪಣಿ ವ್ಯಾಪ್ತಿಗೆ ಬರದ ತಮ್ಮದೇ ಪ್ರತ್ಯೇಕ ನಕಾಶೆಯನ್ನು ತಯಾರು ಮಾಡಿ ಅಧಿಕೃತವೆಂದು ಇತರೆಯವರಿಗೆ ದಿನನಿತ್ಯ ಕಿರುಕುಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಸಿ.ಪಿ. ಯೋಗೇಶ್ವರ್ (ಮಾನ್ಯ ಅರಣ್ಯ ಸಚಿವರು):

(ಅ) ಯಾವುದೇ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಗಳಿಗೆ ಉಪಯೋಗಿಸಲು ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರ ಅಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ರಸ್ತೆ ಕಾಮಗಾರಿಗಳಿಗೆ ಅರಣ್ಯ ಪ್ರದೇಶದಿಂದ ಜಲ್ಲಿ, ಮರಳು ಸಾಗಾಣಿಕೆ ಮಾಡಲು ಸಹ ಸರ್ಕಾರದ ಇತರ ಇಲಾಖೆಯವರೂ ಕೂಡ ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರ ಅಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯುವುದು ಅವಶ್ಯವಾಗಿರುತ್ತದೆ. ಇಂತಹ ಮಂಜೂರಾತಿ ಇಲ್ಲದ ಪಕ್ಷದಲ್ಲಿ ಅರಣ್ಯ (ಸಂರಕ್ಷಣಾ) ಕಾಯ್ದೆಯಂತೆ ಇಂತಹ ಅರಣ್ಯೇತರ ಚಟುವಟಿಕೆಗಳನ್ನು ತಡೆಯುವುದು ಅವರ ಕರ್ತವ್ಯವಾಗಿರುತ್ತದೆ.

(ಆ) ಯಾವುದೇ ಪ್ರದೇಶವನ್ನು ಮೀಸಲು ಅರಣ್ಯವೆಂದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 17 ರಲ್ಲಿ ಸರ್ಕಾರವು ಅಧಿಸೂಚನೆ ಹೊರಡಿಸಿದ ತಕ್ಷಣ ಕರ್ನಾಟಕ ಅರಣ್ಯ ನಿಯಮಾವಳಿಗಳು 1969ರ ನಿಯಮ 17 ರ ಅಡಿಯಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಕಂದಾಯ ಇಲಾಖೆಯ ದಾಖಲಾತಿಗಳಲ್ಲಿ ಅರಣ್ಯ ಭೂಮಿಗಳ ಕುರಿತು ಅವಶ್ಯವಾದ ವಿವರ ದಾಖಲಿಸಬೇಕಾಗುತ್ತದೆ. ಅಲ್ಲದೇ ಜಿಲ್ಲಾ ಸರ್ವೆ ಅಧಿಕಾರಿಯು ಸಹ ಸಂಬಂಧಿಸಿದ ಗ್ರಾಮ ನಕಾಶೆಯಲ್ಲಿ ಅರಣ್ಯ ಭೂಮಿಗೆ ಸಂಬಂಧಿಸಿದಂತೆ ಅವಶ್ಯಕವಾದ ಮಾರ್ಪಾಡುಗಳನ್ನು ದಾಖಲಿಸಬೇಕಾಗುತ್ತದೆ.

ಇದಲ್ಲದೇ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 202/1995 ರಲ್ಲಿ ದಿನಾಂಕ: 12–12–1996 ರಂದು ತೀರ್ಪು ಹಾಗೂ ಎನ್.ಟಿ.ಪಿ.ಪಿ. ಪ್ರಕರಣದಲ್ಲಿ ನೀಡಿರುವ ತೀರ್ಪಿನನ್ವಯ ಅರಣ್ಯ ಕಾಯ್ದೆಯಲ್ಲಿ ಅರಣ್ಯವನ್ನು ಈ ಕೆಳಗಿನಂತೆ ಪರಿಭಾಷಿಸಲಾಗಿದೆ.

The term "forest land" mentioned in Section 2 of the Act refers to Resrve Forest, protected forest or any area recorded as forest in the Government records. Lands which are notified under Section 4 of the Indian Act would also come within the purview of the act. (Supreme Court's Judgement in a NTPC's case). It would also include "Forest" as understood in the dictionary sense. (Supreme Court Order dated 12-12-1996 in

Writ Petition No. 202/1995-Annexure-I). All proposals for diversions of such areas to any non forest purpose. irrespective of its ownership, would require the prior approval of the the Central Government.

ಅದ್ದರಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವ್ಯಾಖ್ಯಾನಿಸಿದಂತೆ ಅರಣ್ಯ ಪ್ರದೇಶಗಳನ್ನು ಕಂದಾಯ ದಾಖಲಾತಿಗಳಲ್ಲಿ ಮತ್ತು ಗ್ರಾಮ ನಕಾಶೆಗಳಲ್ಲಿ ಪ್ರದೇಶವನ್ನು ಗುರುತಿಸಿ ಸೂಕ್ತ ಮಾರ್ಪಾಟುಗಳನ್ನು ಮಾಡುವುದು ಕಂದಾಯ ಇಲಾಖೆಯವರ ಜವಾಬ್ದಾರಿ ಸಹ ಆಗಿರುತ್ತದೆ. ಇದಲ್ಲದೆ ಕಂದಾಯ ದಾಖಲೆಗಳಲ್ಲಿ ಅರಣ್ಯ ಪ್ರದೇಶಗಳನ್ನು ಕಾನೂನಿನಂತೆ ನಮೂದು ಮಾಡುವ ಪ್ರಕ್ರಿಯೆಯನ್ನು ಒಂದು ಕಾಲಮಿತಿಯಲ್ಲಿ ಮಾಡಿ ಮುಗಿಸಲು ಕೂಡ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನ ನೀಡಿದೆ. ಒಂದು ವೇಳೆ ಸದರಿ ದಾಖಲಾತಿಗಳನ್ನು ಕಂದಾಯ ಇಲಾಖೆಯು ಸರಿಯಾಗಿ ನಿರ್ವಹಿಸುವ ಪಕ್ಷದಲ್ಲಿ ಅರಣ್ಯ ಭೂಮಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯವರು ಲಭ್ಯವಿದ್ದ ದಾಖಲಾತಿಗಳ ಆಧಾರದ ಮೇಲೆ ಅಂತಹ ಅರಣ್ಯ ಭೂಮಿಯನ್ನು ಗುರುತಿಸಿ ಅರಣ್ಯೇತರ ಉದ್ದೇಶಗಳಿಗೆ ಬಳಸದಂತೆ ತಡೆಗಟ್ಟಿ ಕರ್ತವ್ಯ ಪಾಲನೆ ಮಾಡುವುದು ಕಾನೂನು ಕ್ರಮವಾಗಿರುತ್ತದೆ. ಆದರೆ ಅನಗತ್ಯವಾಗಿ ಈ ಕುರಿತು ಇತರೆಯವರಿಗೆ ಕಿರುಕುಳ ನೀಡುತ್ತಿರುವುದಿಲ್ಲ.

ಕನ್ನಡಿಗರ ಬೇಡಿಕೆಗಳು

363 (24) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) :– ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಹಾರಾಷ್ಟ್ರದ ಗಡೀನಾಡಿನಲ್ಲಿರುವ ಕನ್ನಡಿಗರ ಬೇಡಿಕೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳನ್ನು ಗಡೀನಾಡಿನ ಕನ್ನಡಿಗರಿಗೆ ಸರ್ಕಾರ ನೀಡಬಹುದೇ;

ಇ) ಗಡಿನಾಡ ಕನ್ನಡದ ಕನ್ನಡಿಗರ ಶಿಕ್ಷಣ ಸಂಸ್ಥೆಗಳಿಗೆ ಅನುದಾನ, ನೀಡಬಹುದೇ;

ಈ) ಸಿಂಧೂರ ಲಕ್ಷ್ಮಣ ಹೆಸರಿನಲ್ಲಿ ಸಂಸ್ಕೃತ ಭವನಗಳನ್ನು ನಿರ್ಮಿಸಲು ಸರ್ಕಾರ ಯೋಜಿಸಿದೆಯೇ?